**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ:– 246/2023**

| | | |
|---|---|---|
| **ಸಾಕ್ಷಿದಾರನ ಹೆಸರು** | : ರುಮಾನ್ ಪಾಷ | **ಪಿ.ಡಬ್ಲ್ಯೂ:–** 17 |
| **ತಂದೆಯ ಹೆಸರು** | : ಇರ್ಷಾದ್ ಪಾಷ | **ಸಿ.ಡಬ್ಲ್ಯೂ:–** 15 |
| **ವಯಸ್ಸು** | : 30 ವರ್ಷ | |
| **ಉದ್ಯೋಗ** | : ಆಟೋ ಚಾಲಕ | |
| **ವಾಸಸ್ಥಳ** | : ಮಂಡಿ ಮೊಹಲ್ಲಾ, ಮೈಸೂರು. | |

**ಸಾಕ್ಷಿಯನ್ನು ಈ ದಿನ ದಿ:12.02.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

**1.** ಸಾಕ್ಷಿ ತನ್ನ ಸಹಿ ಇರುವ ದಾಖಲೆಯನ್ನು ನೋಡಿದ್ದು, ಸದರಿ ದಾಖಲೆ ಅಮಾನತ್ತು ಮಹಜರ್ ಆಗಿದ್ದು, ಅದನ್ನು ನಿಶಾನೆ ಪಿ–29 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–29(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಸಹಿ ಇರುವ ಇನ್ನೊಂದು ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ನೋಟೀಸ್ ಆಗಿದ್ದು, ಅದನ್ನು ನಿಶಾನೆ ಪಿ–30 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–30(ಎ) ಎಂದು ಗುರುತಿಸಲಾಯಿತು. ಈಗ 3 ವರ್ಷಗಳ ಹಿಂದೆ ನಾನು ಮತ್ತು ಚಾ.ಸಾ:16 ರವರು ದುಡ್ಡಿನ ವ್ಯವಹಾರಕ್ಕೆ ಪೊಲೀಸ್ ಠಾಣೆಗೆ ಹೋದಾಗ, ಅಲ್ಲಿ ಸದರಿ ದಾಖಲೆಗಳಿಗೆ ಸಹಿ ಹಾಕಿರುತ್ತೇನೆ. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಮ್ಮನ್ನು ಹೈವೆ ಸರ್ಕಲ್ ಬಳಿ ಇರುವ ಒಂದು ಬಾರಿಗೆ ಪೊಲೀಸರು ಕರೆದುಕೊಂಡು ಹೋಗಿದ್ದು,

ಅಲ್ಲಿ ಸಿಸಿಟಿವಿಯನ್ನು ನೋಡಿ ಯಾರೋ ಮದ್ಯ ಖರೀದಿ ಮಾಡಿರುವ ಬಗ್ಗೆ ಪರಿಶೀಲನೆ ಮಾಡಿದರು. ಸದರಿ ದೃಶ್ಯವನ್ನು ನಾನು ನೋಡಿರುತ್ತೇನೆ. ಅದರಲ್ಲಿ ಯಾರೋ ಮದ್ಯವನ್ನು ಖರೀದಿಸುತ್ತಿದ್ದರು. ನಂತರ ನಮ್ಮನ್ನು ವಾಪಸ್ಸು ಕರೆದುಕೊಂಡು ಬಂದಿದ್ದು, ನಾವು ಮನೆಗೆ ಹೋಗಿರುತ್ತೇವೆ.

**2.** ಸಾಕ್ಷಿಗೆ ನಿಶಾನೆ ಪಿ–6 ಪೆನ್ ಡ್ರೈವ್ ನಲ್ಲಿನ ದೃಶ್ಯಾವಳಿಗಳನ್ನು ನ್ಯಾಯಾಲಯದ ಕಂಪ್ಯೂಟರಿನಲ್ಲಿ ತೋರಿಸಲಾಗಿ ಸಾಕ್ಷಿಯು ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಯಾವುದೇ ಪೆನ್ ಡ್ರೈವನ್ನು ಪೊಲೀಸರು ತೋರಿಸಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುವುದಿಲ್ಲ. 1 ಮತ್ತು 2 ನೇ ಆರೋಪಿತರನ್ನು ನಾನು ದೃಶ್ಯಾವಳಿಗಳಲ್ಲಿ ನೋಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**3.** ನಾವು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಠಾಣೆಯಲ್ಲಿ ನಿಶಾನೆ ಪಿ–30 ನೋಟಿಸ್ ನೀಡಿ ನನ್ನ ಸಹಿಯನ್ನು ಪಡೆದಿರುತ್ತಾರೆ, ನಂತರ ನನ್ನನ್ನು ಮತ್ತು ಚಾ.ಸಾಃ16 ರವರನ್ನು ಬಂಬೂರಾಜ್ ಸೈಯಾಜಿರಾವ್ ರಸ್ತೆಯಲ್ಲಿರುವ ರಾಜಲಕ್ಷ್ಮೀ ಸ್ಪಿರಿಟ್ ವೈನ್ ಶಾಪಿಗೆ ಕರೆದುಕೊಂಡು ಹೋಗಿ ಅಲ್ಲಿ 5 ಸಿಸಿಟಿವಿ ಕ್ಯಾಮೆರಾಗಳಿದ್ದು, ಅವುಗಳಲ್ಲಿ 2 ಮತ್ತು 4 ನೇ ಕ್ಯಾಮೆರಾದಲ್ಲಿದ್ದ ದೃಶ್ಯಾವಳಿಗಳಲ್ಲಿ 1 ಮತ್ತು 2 ನೇ ಆರೋಪಿತರು ಪಿರ್ಯಾದಿ ಜೊತೆ ಬಂದು ಮದ್ಯ ಖರೀದಿ ಮಾಡಿದ ಬಗ್ಗೆ ದೃಶ್ಯಾವಳಿಗಳಿದ್ದು, ಅವುಗಳನ್ನು

ನಮಗೆ ತೋರಿಸಿ ಮಹಜರ್ ಜರುಗಿಸಿ 2 ದೃಶ್ಯಾವಳಿಗಳನ್ನು ಪೆನ್ ಡ್ರೈವಿಗೆ ಸಂಗ್ರಹಿಸಿಕೊಂಡರು. ಅಲ್ಲಿ ಜರುಗಿಸಿದ ಮಹಜರಿಗೆ ಸ್ಥಳದಲ್ಲಿಯೇ ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಪೊಲೀಸರು ನಮ್ಮನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಶಾನೆ ಪಿ–31 ಎಂದು ಗುರುತಿಸಲಾಯಿತು.

**4.** ನಾನು ಪಿರ್ಯಾದುದಾರರು, 1 ಮತ್ತು 2 ನೇ ಆರೋಪಿತರನ್ನು ನೋಡಿರುತ್ತೇನೆ, ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು 1 ಮತ್ತು 2 ನೇ ಆರೋಪಿತರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**